US – 041

ಎರಡನೇ ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ, ಮೇ 2017
(ಫ್ರೆಶರ್ಸ್ + ರಿಪೀಟರ್ಸ್) (ಸಿ.ಬಿ.ಸಿ.ಎಸ್.)
(2014 – 15 ಮತ್ತು ನಂತರದವರಿಗೆ)
ಕನ್ನಡ ಭಾಷಾ ಪತ್ರಿಕೆ – II
ಸುವರ್ಣ ಸಂಪದ

Time : 3 Hours　　　Max. Marks : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ. **(1×6=6)**

ಪೋಲೀಸರ ದೊಣ್ಣೆಗಳು ಏಜೆಂಟರ ಕತ್ತಿಗಳು
ವೇದ ಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆ ಕಸಕಡ್ಡಿಯಾಗಿ
ತೇಲಿ ತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು.

ಆ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×2=4)**
1) ಡಾ.ಎಚ್.ಎಲ್. ಪುಷ್ಪ
2) ಕಣ್ವ ಮಹರ್ಷಿ
3) ದಲಿತ ಸಾಹಿತ್ಯ
4) ಕೊರವ ಜನಾಂಗ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**
1) ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಯ ಸ್ವರೂಪವನ್ನು 'ಹೂಜಿ ಹಾಗೂ ಮದಿರೆ' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.
2) ಪೆಟ್ರೋಮ್ಯಾಕ್ಸ್ ಹೊತ್ತವರ ಬದುಕಿನ ದಾರುಣತೆಯನ್ನು ಕವಿ ಹೇಗೆ ವಿವರಿಸಿದ್ದಾರೆ ?

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×5=10)**
1) "ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ" ಎಂದು ಜಲಗಾರ ಹೇಳುವ ಸಂದರ್ಭ.
2) ಹುಡುಗಿಯ ಹಾಡಿನಲ್ಲಿ ಕಂಡುಬರುವ – ಬದುಕಿನ ನೋವು.
3) ಜಲಗಾರನ ಹಾಡಿನ ಬಗ್ಗೆ ಪಾರ್ವರ ಪ್ರತಿಕ್ರಿಯೆ.

P.T.O.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) 'ಜಲಗಾರ' ನಾಟಕದ ಆಶಯವನ್ನು ವಿವರಿಸಿ.

2) ಜಲಗಾರ, ರೈತ, ಕಬ್ಬಿಗ–ಇವರಲ್ಲಿ ಇಬ್ಬರ ಪಾತ್ರ ಪರಿಚಯ ಮಾಡಿಕೊಡಿ.

III. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×5=5)

1) ಕೃಷ್ಣ–ಕೃಷ್ಣೆಯರ ಬಗ್ಗೆ ಲೋಹಿಯಾರ–ನಿಲುವು.

2) ಟಾಲ್‌ಸ್ಟಾಯ್‌ನ ಬಾಲ್ಯ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಕಾರೆಕುಚಿಯ ದುರಂತಕ್ಕೆ ಕಾರಣಗಳೇನು ? ಪರಿಸರ ಸಂರಕ್ಷಣೆಗೆ ಲೇಖಕರು ಸೂಚಿಸುವ ಪರಿಹಾರಗಳನ್ನು ಕುರಿತು ಬರೆಯಿರಿ.

2) ಸೌಂದರ್ಯ ಮತ್ತು ಮೈ ಬಣ್ಣಕ್ಕೆ ಸಂಬಂಧಿಸಿದಂತೆ ಲೋಹಿಯಾ ಅವರ ವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತ ಉತ್ತರ ಬರೆಯಿರಿ. (1×5=5)

1) ರಾಜ್ಯ ಸರ್ಕಾರದ ಕೃಷಿ ಮಾರಾಟ ನೀತಿ – 2013.

2) 'ಏಕರೂಪದ ಅಪ್ಲಿಕೇಶನ್'.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) 'ಮೌಸ್ ಬಿಟ್ಟು ಮೊಲ ಹಿಡಿದಾತ' ಲೇಖನದ ಹಿನ್ನೆಲೆಯಲ್ಲಿ ಸ್ವ–ಉದ್ಯೋಗದ ಮಹತ್ವವನ್ನು ವಿವರಿಸಿ.

2) 'ಮೊಬೈಲ್ ಬ್ಯಾಂಕಿಂಗ್' ನ ಪ್ರಮುಖ ಸೇವೆಗಳು ಹಾಗೂ ಅದನ್ನು ಪಡೆಯುವಲ್ಲಿ ವಹಿಸಬೇಕಾದ ಎಚ್ಚರಿಕೆಗಳೇನು ? ವಿವರಿಸಿ.

---